# ವೈದ್ಯ ಸಂಗಣ್ಣನವರ ವಚನಗಳಲ್ಲಿ ದೇಹ ಮತ್ತು ಆತ್ಮ ಮೀಮಾಂಸೆಯ ಒಳನೋಟಗಳು

**ಮಲ್ಲಿಕಾರ್ಜುನಗೌಡ ಎನ್.***

**DOI: https://doi.org/10.5281/zenodo.24338645**

**ABSTRACT**

ವೈದ್ಯಸಂಗಣ್ಣನವರ ವಚನಗಳಲ್ಲಿ ವ್ಯಕ್ತವಾಗಿರುವ ದೇಹ ಮತ್ತು ಆತ್ಮದ ಪರಿಕಲ್ಪನೆಗಳನ್ನು ವೈದ್ಯಕೀಯ ಹಾಗೂ ತಾತ್ತ್ವಿಕ ನೆಲೆಗಳಲ್ಲಿ ವಿಶ್ಲೇಷಿಸುವುದು ಈ ಲೇಖನದ ಮುಖ್ಯ ಉದ್ದೇಶವಾಗಿದೆ. ಲಭ್ಯವಿರುವ ವೈದ್ಯಸಂಗಣ್ಣನವರ ವಚನಗಳನ್ನು ಆಧಾರವಾಗಿಸಿಕೊಂಡು, ಅವುಗಳಲ್ಲಿ ಬಳಕೆಯಾಗಿರುವ ವೈದ್ಯಕೀಯ ಪರಿಭಾಷೆ, ದೇಹದ ಸ್ವರೂಪ, ಆತ್ಮದ ಪರಿಕಲ್ಪನೆ ಹಾಗೂ ಇವೆರಡರ ಸಂಬಂಧವನ್ನು ಪಠ್ಯವಿಶ್ಲೇಷಣೆಯ ಮೂಲಕ ಪರಿಶೀಲಿಸಲಾಗಿದೆ. ಪಂಚತತ್ತ್ವ, ತ್ರಿದೋಷ, ನಾಡಿ, ಪ್ರಾಣ, ಇಂದ್ರಿಯ, ವ್ಯಾಧಿ ಮತ್ತು ಚಿಕಿತ್ಸೆಗೆ ಸಂಬಂಧಿಸಿದ ವೈದ್ಯಕೀಯ ಪರಿಕಲ್ಪನೆಗಳು ಅವರ ದೇಹಚಿಂತನೆಯ ಪ್ರಮುಖ ಅಂಶಗಳಾಗಿವೆ. ದೇಹವು ಪಂಚತತ್ತ್ವಗಳಿಂದ ನಿರ್ಮಿತವಾದ ನಶ್ವರ ಅಸ್ತಿತ್ವವಾದರೂ, ಆತ್ಮಸಾಧನೆಗೆ ಅಗತ್ಯವಾದ ಸಾಧನವೆಂಬ ದೃಷ್ಟಿ ಅವರ ವಚನಗಳಲ್ಲಿ ವ್ಯಕ್ತವಾಗುತ್ತದೆ. ದೇಹದ ವ್ಯಾಧಿಯ ಜೊತೆಗೆ ಅಜ್ಞಾನ, ಮಾಯೆ ಮತ್ತು ಕರ್ಮಬಂಧನಗಳನ್ನು ಆತ್ಮದ 'ರೋಗ' ಎಂಬ ರೂಪಕದ ಮೂಲಕ ಅವರು ನಿರೂಪಿಸುತ್ತಾರೆ. ವೈದ್ಯಕೀಯ ಚಿಕಿತ್ಸೆಯ ಪರಿಭಾಷೆಯನ್ನು ಅಂತರಂಗದ ಶುದ್ಧೀಕರಣ ಮತ್ತು ಆತ್ಮಜ್ಞಾನದ ಸಾಧನೆಗೆ ರೂಪಕವಾಗಿ ಬಳಸಿರುವುದು ಅವರ ವಚನಗಳ ವಿಶಿಷ್ಟ ಲಕ್ಷಣವಾಗಿದೆ. ಭಕ್ತಿ, ವಿಶ್ವಾಸ, ಜ್ಞಾನ ಹಾಗೂ ಗುರು–ಲಿಂಗ–ಜಂಗಮ ತತ್ತ್ವಗಳು ಆತ್ಮಸಾಧನೆಯ ಪ್ರಮುಖ ಮಾರ್ಗಗಳಾಗಿ ಪ್ರತಿಪಾದಿತವಾಗಿವೆ. ಈ ಮೂಲಕ ದೇಹ, ಮನಸ್ಸು ಮತ್ತು ಆತ್ಮಗಳನ್ನು ಪರಸ್ಪರ ಸಂಬಂಧಿತ ಅಸ್ತಿತ್ವಗಳಾಗಿ ನೋಡುವ ಸಮಗ್ರ ಮಾನವದರ್ಶನ ಅವರ ವಚನಗಳಲ್ಲಿ ರೂಪುಗೊಂಡಿರುವುದು ಕಂಡುಬರುತ್ತದೆ. ವೈದ್ಯಕೀಯ ಜ್ಞಾನವನ್ನು ತಾತ್ತ್ವಿಕ ಚಿಂತನೆಯ ಅಭಿವ್ಯಕ್ತಿಯನ್ನಾಗಿ ಪರಿವರ್ತಿಸಿರುವ

* **ಮಲ್ಲಿಕಾರ್ಜುನಗೌಡ ಎನ್.,** ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಭಾಗ, ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಂಗಳೂರು.

ವೈದ್ಯಸಂಗಣ್ಣನವರ ವೈಶಿಷ್ಟ್ಯವನ್ನು ಈ ಅಧ್ಯಯನ ಗುರುತಿಸುತ್ತದೆ. ಹೀಗಾಗಿ ಅವರ ವಚನಗಳು ಮಧ್ಯಕಾಲೀನ ಕರ್ನಾಟಕದ ವೈದ್ಯಕೀಯ ಜ್ಞಾನಪರಂಪರೆ ಮತ್ತು ಶರಣರ ಆತ್ಮಾನುಭವ ಪರಂಪರೆಗಳ ನಡುವಿನ ವಿಶಿಷ್ಟ ಸಂಬಂಧವನ್ನು ಪರಿಚಯಿಸುವ ಮಹತ್ವದ ಆಕರಗಳಾಗಿವೆ.

**KEYWORDS**: ವಚನಗಳು, ವೈದ್ಯ ಸಂಗಣ್ಣ, ಶರಣ ಚಿಂತನೆ, ದೇಹ ಮತ್ತು ಆತ್ಮ ಮೀಮಾಂಸೆ.

ವಚನ ಸಾಹಿತ್ಯವು ಕೇವಲ ಭಕ್ತಿ ಅಥವಾ ಧಾರ್ಮಿಕ ಅನುಭವದ ಸಾಹಿತ್ಯವಲ್ಲ. ಇದು ಮಧ್ಯಕಾಲೀನ ಕರ್ನಾಟಕದ ಸಾಮಾಜಿಕ, ನೈತಿಕ, ಆಧ್ಯಾತ್ಮಿಕ, ದಾರ್ಶನಿಕ ಮತ್ತು ಸಾಂಸ್ಕೃತಿಕ ಚಿಂತನೆಗಳ ಅನೇಕ ಮುಖಗಳನ್ನು ಒಳಗೊಂಡಿರುವ ಮಹತ್ವದ ಸಾಹಿತ್ಯದ ಪ್ರಕಾರವಾಗಿದೆ. ವಚನ ಚಳುವಳಿಯಲ್ಲಿ ಭಿನ್ನ ಭಿನ್ನ ಕಾಯಕ ಧರ್ಮದ ಶರಣರು ಭಾಗವಹಿಸಿದ್ದರ ಫಲವಾಗಿ ಕಾಯಕತತ್ವವೇ ಪ್ರಮುಖ ದರ್ಶನವಾಗಿದೆ ಎನ್ನಬಹುದು. ವಚನ ಚಳುವಳಿಯಲ್ಲಿ ವಚನಗಳನ್ನು ರಚಿಸಿದ ಪ್ರತಿ ವಚನಕಾರರು ಕಾಯಕ ಮತ್ತು ಅನುಭಾವಿಕ ಸಾಧನೆಗಳ ದೃಷ್ಟಿಯಿಂದ ತಮ್ಮದೇ ಆದ ಭಾಷಿಕ, ಅನುಭಾವಿಕ ನೆಲೆಯಲ್ಲಿ ಅನನ್ಯತೆಯನ್ನು ಹೊಂದಿದವರಾಗಿದ್ದಾರೆ. ವಚನಗಳು ಸಮಾಜದಲ್ಲಿನ ಲಿಂಗ ತಾರತಮ್ಯ, ಅಸ್ಪೃಶ್ಯತೆ, ಜಾತಿ ವ್ಯವಸ್ಥೆ, ವರ್ಣಭೇದ ಮತ್ತು ವರ್ಗಭೇದಗಳ ವಿರುದ್ಧ ಮಾತಾಡುತ್ತಾ ಸಮಾಜದ ಸ್ವಾಸ್ಥ್ಯವನ್ನು ಸ್ಥಾಪಿಸುವ ಗುರಿಗಳನ್ನು ಹೊಂದಿದ್ದವು. ಮುಂದುವರೆದು ವಚನಗಳು ಮನುಷ್ಯನ ಅಂತರಂಗದ ಒಟ್ಟು ಸ್ವಾತಂತ್ರ್ಯದ ಬಗ್ಗೆ ಹೆಚ್ಚು ಮಾತಾಡುತ್ತವೆ. ಮನುಷ್ಯನಿಗೆ ಅಂತರಂಗದ ಸ್ವಾತಂತ್ರ್ಯ ದಕ್ಕುವುದು ಜ್ಞಾನದ ಮೂಲಕ. ಈ ದೃಷ್ಟಿಯಿಂದ 'ಅರಿವೇ ಗುರು' ಎಂಬ ಮಹತ್ವವಾದ ತತ್ವವು ವಚನಚಳುವಳಿಯದ್ದಾಯಿತು ಎನ್ನಬಹುದು.

ವಚನಕಾರರು ಸಮಾಜದ ಸ್ವಾಸ್ಥ್ಯದ ಕುರಿತಾಗಿ ಮಾತಾಡುತ್ತಲೇ ದೇಹ ಮತ್ತು ಆತ್ಮಗಳ ಸಂಬಂಧ ಮತ್ತು ಇವೆರಡರ ಒಟ್ಟು ಅರಿವಿನ ಮೂಲಕ ಸಾಧಿಸಬಹುದಾದ ಆಧ್ಯಾತ್ಮಿಕ ಸಾಧನೆಗಳನ್ನು ಕುರಿತು ಮಾತಾಡುತ್ತಾರೆ. ಈ ದೃಷ್ಟಿಯಿಂದ ಅಲ್ಲಮಪ್ರಭು, ಚೆನ್ನಬಸವಣ್ಣ, ಇನ್ನಿತರರ ವಚನಗಳಲ್ಲಿ ಯೋಗ ಪರಿಭಾಷೆಗಳು ಹೆಚ್ಚಾಗಿ ಬಳಕೆಯಾಗಿರುವುದನ್ನು ಗಮನಿಸಬಹುದು. ಇದೇ ಮಾರ್ಗದಲ್ಲಿ ದೇಹ ಮತ್ತು ಆತ್ಮ ತತ್ವದ ವಿಷಯಗಳನ್ನೇ ಪ್ರಮುಖವಾಗಿರಿಸಿಕೊಂಡು ವಚನಗಳನ್ನು ರಚಿಸಿದ ವಿಶಿಷ್ಟವಾದ ವಚನಕಾರರೆಂದರೆ ವೈದ್ಯ ಸಂಗಣ್ಣನವರು. ವೈದ್ಯವೃತ್ತಿಯನ್ನೇ ತಮ್ಮ ಕಾಯಕವಾಗಿಸಿಕೊಂಡಿದ್ದ ಸಂಗಣ್ಣನವರು ವೈದ್ಯಶಾಸ್ತ್ರದ ಪರಿಭಾಷೆಯನ್ನೇ ತಮ್ಮ ತಾತ್ವಿಕ ಚಿಂತನೆಗಳ ಅಭಿವ್ಯಕ್ತಿಗೆ ಹೆಚ್ಚಾಗಿ ಬಳಸಿರುವುದರಿಂದ ವಚನಕಾರರಲ್ಲೇ ವಿಶಿಷ್ಟವಾಗಿ ಕಂಡುಬರುತ್ತಾರೆ. ಅವರು ಬಳಸಿದ ನಾಡಿ, ಪಂಚತತ್ವ, ಅನುಪಾನ, ವಾತ–ಪಿತ್ತ–ಶ್ಲೇಷ್ಮ, ಪಿಂಡ, ಪ್ರಾಣ ಮುಂತಾದ ಪದಗಳನ್ನು ಗಮನಿಸಿದರೆ ವೈದ್ಯಕೀಯ ಕ್ಷೇತ್ರದಲ್ಲಿ ಆಳವಾದ ಜ್ಞಾನವಿದ್ದವರು ಎಂಬುದು ಖಚಿತವಾಗುತ್ತದೆ. ಇಲ್ಲಿಯವರೆಗೆ

ಸಂಗಣ್ಣನವರ ಲಭ್ಯವಿರುವ ವಚನಗಳ ಸಂಖ್ಯೆ 21. ಸಂಗಣ್ಣನವರು ನುರಿತ ವೈದ್ಯರು ಮಾತ್ರವಲ್ಲದೇ ಆಧ್ಯಾತ್ಮಸಾಧನೆಗೈದ ವ್ಯಕ್ತಿಯಾಗಿದ್ದರು. ಈ ಕಾರಣಕ್ಕಾಗಿಯೇ ಅನುಭವಮಂಟಪಕ್ಕೆ ಬಸವಣ್ಣನವರು ಕರೆತಂದರು ಎಂಬುದು "...ಇದು ಲಿಂಗಾಂಗಿಗಳ ವೈದ್ಯ ಸಂಗನಬಸವಣ್ಣ ಬಂದಾಗ ಎನ್ನ ಕೊಂಡುಬಂದ, ತನ್ನ ವಶಕ್ಕೆ ವೈದ್ಯನೆಂದು.." ಎಂಬ ಅವರ ಒಂದು ವಚನದ ಸಾಲಿಂದ ತಿಳಿದುಬರುತ್ತದೆ.

ವೈದ್ಯ ಸಂಗಣ್ಣನವರ ವಚನಗಳ ಪ್ರಮುಖ ವೈಶಿಷ್ಟ್ಯವೆಂದರೆ ವೈದ್ಯಕೀಯ ಜ್ಞಾನ ಮತ್ತು ಅಂತರಂಗದ ಜ್ಞಾನದ ಸಮನ್ವಯ. ಅವರ ವಚನಗಳಲ್ಲಿ ವೈದ್ಯಕೀಯ ವೃತ್ತಿಯ ಅನುಭವವು ಕೇವಲ ವೃತ್ತಿಪರ ಜ್ಞಾನವಾಗಿ ಉಳಿಯದೆ, ಆತ್ಮಜ್ಞಾನದ ಅಭಿವ್ಯಕ್ತಿಗೆ ರೂಪಕವಾಗಿ ಬಳಕೆಯಾಗಿರುವುದು ವಿಶೇಷವೆನಿಸಿದೆ. ಅವರ ವಚನಗಳಲ್ಲಿ ವೈದ್ಯಕೀಯ ಪರಿಭಾಷೆಯ ವ್ಯಾಪ್ತಿಯೂ ಗಮನಾರ್ಹವಾಗಿದೆ. ನಾಡಿಗಳ ಅನೇಕ ಹೆಸರುಗಳು, ಪಂಚತತ್ವಗಳಿಗೆ ಸಂಬಂಧಿಸಿದ ದೇಹಸ್ಥಾನಗಳು, ದೇಹದೊಳಗಿನ ವಾಯುವಿನ ಚಲನೆ, ಅಗ್ನಿಯ ಕಾರ್ಯ, ರೋಗಗಳ ಸ್ವರೂಪ, ಔಷಧಗಳ ಬಳಕೆ ಮುಂತಾದ ವಿಷಯಗಳು ವಿಶೇಷವೆನಿಸಿವೆ. ಇದೇ ವೈದ್ಯಕೀಯ ಜ್ಞಾನವು ಮುಂದೆ ಆತ್ಮ, ಭಕ್ತಿ ಮತ್ತು ಅನುಭಾವ ಸಾಧನೆಯ ವಿವರಣೆಗೆ ರೂಪಕವಾಗುತ್ತದೆ.

ವೈದ್ಯ ಸಂಗಣ್ಣನವರ ಬಹುಪಾಲು ವಚನಗಳಲ್ಲಿ ದೇಹಮೀಮಾಂಸೆ ಕುರಿತ ವಿಷಯಗಳು ಸಿಗುತ್ತವೆ. ಅವರ ದೇಹಚಿಂತನೆಯ ಪ್ರಮುಖ ಆಧಾರವೆಂದರೆ ದೇಹವು ಪಂಚತತ್ವಗಳಿಂದ ನಿರ್ಮಿತವಾಗಿದೆ ಎಂಬುದು. ಭಾರತೀಯ ವೈದ್ಯ ಪರಂಪರೆಯ ಮೂಲಭೂತ ತತ್ವವೂ ಇದೇ ಆಗಿದೆ. ಪಂಚಭೂತ ತತ್ವಗಳಿಂದಲೇ ನಿರ್ಮಿತವಾದ ತ್ರಿದೋಷ ಸಿದ್ಧಾಂತದ ಸಂಗತಿಗಳೂ ವೈದ್ಯ ಸಂಗಣ್ಣನವರ ಅನೇಕ ವಚನಗಳಲ್ಲಿ ಕಂಡುಬರುತ್ತವೆ.

**"ಐದು ತತ್ತ್ವಂಗಳಿಂದಾದ ದೇಹಕ್ಕೆ ರೋಗರುಜೆಯಹುದೆ?,**
**ಅಪ್ಪು ತನುವಿನ ಶ್ರೇಷ್ಠವಾಗಲಾಗಿ ವಾತ ಪಿತ್ತ ಶ್ಲೇಷ್ಮ ಬಲಿಯಿತ್ತು,**
**ತ್ರಿದೋಷ ಗುಣದಿಂದ ನಾನಾ ಬಹುತಾಪತ್ರಯದ**
**ವ್ಯಾಧಿಯ ಚಿಕಿತ್ಸೆಯನಾರೂ ಅರಿಯರಲ್ಲಾ!**
**ತನುವಿಂಗೆ ವಾತ, ಪೈತ್ತ, ಶ್ಲೇಷ್ಮ,**
**ಆತ್ಮಂಗೆ ಆಣವ, ಮಾಯಾ, ಕಾರ್ಮಿಕ**
**ಇಂತೀ ತ್ರಿವಿಧ ಮಲತ್ರಯದ ರೋಗರುಜೆಯಡಸಿ,**
**ಬಂಧನದಲ್ಲಿ ಸಾವುತ್ತಿದೆ ಅಂಗ"**

ಮುಂತಾದ ಅನೇಕ ವಚನಗಳ ಸಾಲುಗಳಲ್ಲಿ ದೇಹದ ಸ್ವಭಾವ ಮತ್ತು ಅದರ ವಿಕಾರಶೀಲತೆಯ ಕುರಿತು ಮೂಲಭೂತವಾದ ವಿಚಾರ ಅಡಗಿದೆ. ಪಂಚಭೂತಗಳಿಂದ ರೂಪುಗೊಂಡ ದೇಹವು ಪರಿವರ್ತನಶೀಲವಾದುದು. ಆದ್ದರಿಂದ ಅದಕ್ಕೆ ರೋಗ, ವೃದ್ಧಾಪ್ಯ, ಕ್ಷಯ ಮುಂತಾದ ಸ್ಥಿತಿಗಳು ಸಹಜ. ಇಲ್ಲಿ 'ದೇಹ' ಎಂಬುದು ಕೇವಲ ಮಾಂಸ, ರಕ್ತ, ಅಸ್ಥಿ ಮೊದಲಾದ ಸ್ಥೂಲ ಘಟಕಗಳ ಸಮೂಹವಲ್ಲ. ಅದು ಪ್ರಕೃತಿಯ

ಪಂಚತತ್ತ್ವಗಳ ಸಂಯೋಜನೆಯಿಂದ ರೂಪುಗೊಂಡ ಜೀವಂತ ವ್ಯವಸ್ಥೆ. ಈ ಕಾರಣದಿಂದ ದೇಹದ ಆರೋಗ್ಯವು ಪ್ರಕೃತಿಯ ಸಮತೋಲನದೊಂದಿಗೆ ಸಂಬಂಧ ಹೊಂದಿದೆ. ವೈದ್ಯ ಸಂಗಣ್ಣನವರ ದೃಷ್ಟಿಯಲ್ಲಿ ರೋಗವು ದೇಹಕ್ಕೆ ಹೊರಗಿನಿಂದ ಮಾತ್ರ ಬರುವುದಿಲ್ಲ. ಅದು ದೇಹದ ಆಂತರಿಕ ಸಮತೋಲನದಲ್ಲಿ ಉಂಟಾಗುವ ವ್ಯತ್ಯಯವೂ ರೋಗಗಳಿಗೆ ಕಾರಣಗಳಾಗಿ ಪರಿಣಮಿಸಿವೆ. ''ತನುವಿಂಗೆ ವಾತ ಪಿತ್ತ ಶ್ಲೇಷ್ಮ'' ಎಂಬುವಲ್ಲಿ ದೇಹಕ್ಕೆ ವಾತ–ಪಿತ್ತ–ಕಫಗಳ ವ್ಯತ್ಯಯವು ರೋಗಕ್ಕೆ ಕಾರಣವಾದರೆ ''ಆತ್ಮಂಗೆ ಆಣವ–ಮಾಯಾ–ಕಾರ್ಮಿಕ'' ಎಂಬುವಲ್ಲಿ ಆತ್ಮಕ್ಕೆ ಮೋಹ–ಮಾಯೆ–ಕರ್ಮಗಳು ರೋಗಕಾರಣಗಳಾಗಿ ಪರಿಣಮಿಸಿವೆ. ಹಾಗಾಗಿ ರೋಗವೆಂಬುದು ಕೇವಲ ದೇಹಕ್ಕೆ ಮಾತ್ರ ಸಂಭವಿಸಿಲ್ಲ ಆತ್ಮಕ್ಕೂ ರೋಗವು ಅಂಟಿದೆ. ಈ ದೃಷ್ಟಿಯಿಂದ ದೇಹವನ್ನು ಅದರ ಮೂಲಭೂತ ತತ್ತ್ವಗಳ ಹಿನ್ನೆಲೆಯಲ್ಲಿ ಗ್ರಹಿಸುವ ಅಗತ್ಯವಿದೆ ಎಂಬುದು ಗಮನಾರ್ಹವಾಗಿದೆ. ಇದು ಆಯುರ್ವೇದದ ಪಂಚಮಹಾಭೂತ ಮತ್ತು ದೋಷಸಿದ್ಧಾಂತಗಳೊಂದಿಗೆ ಸಾಮ್ಯತೆಗಳನ್ನು ಹೊಂದಿದ್ದರೂ, ವೈದ್ಯ ಸಂಗಣ್ಣನವರ ವಚನಗಳ ಅಂತಿಮ ಉದ್ದೇಶ ಕೇವಲ ವೈದ್ಯಕೀಯ ವಿವರಣೆ ಅಲ್ಲ. ದೇಹದ ಸ್ವರೂಪವನ್ನು ಅರಿತು ಅದರಾಚೆಯ ಆತ್ಮತತ್ತ್ವದ ಕಡೆಗೆ ಸಾಗುವುದು ಅವರ ಚಿಂತನೆಯ ಮುಖ್ಯ ಗುರಿಯಾಗಿದೆ.

ಸಾಮಾನ್ಯವಾಗಿ ಭಾರತದ ಅನೇಕ ಆಧ್ಯಾತ್ಮ ಪರಂಪರೆಗಳಲ್ಲಿ ದೇಹವನ್ನು ನಶ್ವರ, ಅಶಾಶ್ವತ ಮತ್ತು ಭವ ಬಂಧನಕ್ಕೆ ಕಾರಣವೆಂದು ನೋಡುವ ಪ್ರವೃತ್ತಿ ಕಂಡುಬರುತ್ತದೆ. ಆದರೆ ಶರಣರ ಚಿಂತನೆಯಲ್ಲಿ ದೇಹಕ್ಕೆ ಒಂದು ವಿಶೇಷ ಮಹತ್ವವಿದೆ. ದೇಹವೇ ಕಾಯಕಕ್ಕೆ ಆಧಾರ. ಕಾಯಕದ ಮೂಲಕವೇ ಅನುಭಾವ ಸಾಧ್ಯ. ವೈದ್ಯ ಸಂಗಣ್ಣನವರಲ್ಲಿಯೂ ಇದೇ ದೇಹದೃಷ್ಟಿ ಕಾಣುತ್ತದೆ. ದೇಹವನ್ನು ಕಾಪಾಡುವುದು ಕೇವಲ ಭೌತಿಕ ಸುಖಕ್ಕಾಗಿ ಅಲ್ಲ. ದೇಹವು ಆತ್ಮಸಾಧನೆಯ ಸಾಧನವಾಗಿರುವುದರಿಂದ ಅದರ ಆರೋಗ್ಯವೂ ಮುಖ್ಯ. ಈ ದೃಷ್ಟಿಯಿಂದಲೇ ಅವರ ವಚನಗಳಲ್ಲಿ ದೇಹ ಮತ್ತು ಅಂತರಂಗವನ್ನು ಬೇರ್ಪಡಿಸದೆ ನೋಡುವ ದೃಷ್ಟಿ ವ್ಯಕ್ತವಾಗುತ್ತದೆ. ದೇಹದ ಕಾಯಿಲೆಯನ್ನು ನಿವಾರಿಸುವುದರ ಜೊತೆಗೆ ಅಂತರಂಗದ ಅಸ್ವಸ್ಥತೆಯನ್ನೂ ನಿವಾರಿಸಬೇಕು. ಈ ಕಾರಣದಿಂದ ಅವರ ವೈದ್ಯಕೀಯ ದೃಷ್ಟಿ 'ದೇಹ ಮತ್ತು ಆತ್ಮ'ಗಳ ಸಮಗ್ರ ಚಿಕಿತ್ಸೆಯ ಕುರಿತಾಗಿಯೇ ಇರುವುದು ಗೋಚರಿಸುತ್ತದೆ.

**ಪಿಂಡ ಪ್ರಾಣ ಆರೋಗ್ಯಂಗಳ ಚಿಕಿತ್ಸೆಯನರಿದು,**
**ವೈದ್ಯವ ಮಾಡಬಲ್ಲಡೆ ಪಂಡಿತನಪ್ಪ.**
**ಘಟತ್ರಯದ ಭೇದವನರಿದು ಮಾಡುವ ಕ್ರಮವೆಂತುಂಟೆಂದಡೆ :**
**ಕಟಿ ಮೊದಲಾದ ಕೀಳುದೆಸೆಯಲ್ಲಿ ಸಂದಿನ ಭೇದ.**
**ಅಂಗುಲಿ ಸಂದು ಇಪ್ಪತ್ತು, ಮಡಸಂದು ಎರಡು, ಪಚ್ಚಳ ಸಂದು ಎರಡು.**
**ಇಂತೀ ಅಧಮನಾಳದಿಂದ ಕೆಳಗಾದ ನಾಳ ನಾಡಿಗಳ ಸೋಧಿಸಿಕೊಂಡು,**
**ಊರ್ಧ್ವದಂಡದಲ್ಲಿ ಉಭಯಪಕ್ಷದಲ್ಲಿ ಕೆಲವರಿದ ಸಂದು ಅರುವತ್ತಾರು.**

**ಅಂತು ಕೀಳು ಮೊದಲಾದ ಸಂದು ನರ ಇಪ್ಪತ್ತನಾಲ್ಕು.**
**ಅದರಿಂದ ಮೊದಲಾದ ಉಭಯಕರದ ಸಂದು,**
**ಅಂಗುಲಿಯ ಸಂದು ಇಪ್ಪತ್ತಂಟು. ಇಂತೀ ಉಭಯಕರದ ಸಂದಾರು.**
**ಇಂತೀ ಕರದೊಳಗಾದ ಮೂವತ್ತುನಾಲ್ಕರ ಸಂದಿನ**
**ನಾಳನಾಡಿಗಳನರಿದು, ಅದರಿಂದ ಮೇಲೆ ಸಂಪುಟವೆರಡು.**
**ಜಿಹ್ವೆ ಮೊದಲಾದ ಏಳುದ್ವಾರಂಗಳ ಸೋಧಿಸಿಕೊಂಡು,**
**ಕಪಾಲದ ತ್ರಿವಿಧದ ಹೊಲಿಗೆಯ ಕಂಡು, ಅಂಗುಷ್ಟ ತೊಟ್ಟು**
**ವಾಣಾಗ್ರಪರಿಯಂತರದಲ್ಲಿ ಸ್ಥಾನವ ಮುಟ್ಟಿ ನೋಡಿ,**
**ರವಿ ಶಶಿ ಪವನ ಪಾವಕ ಮುಟ್ಟಿ ಎಡೆಯಾಡುವ ಲಕ್ಷಣವ ಕಂಡು,**
**ಅವಕ್ಕೆ ಚಿಕಿತ್ಸೆಯಪ್ಪ ಅನ್ನ ಔಷಧಿ ಪಯಪಾನ ಉದಕ**
**ಮುಂತಾದ ತೆರವನರಿದಡೆ, ಆತನೆ ಇರವನರಿದವ.**
**ಇಂತೀ ಕಾಯಕದ ವೈದ್ಯವ ಮಾಡಬಲ್ಲವ,**
**ಮೇಲನರಿದು ಕೀಳ ಮರೆಯಬಲ್ಲಡೆ, ಆತ ವೈದ್ಯಪಂಡಿತನೆಂಬೆ,**
**ಮರುಳಶಂಕರಪ್ರಿಯ ಸಿದ್ಧರಾಮೇಶ್ವರಲಿಂಗವ ಬಲ್ಲವ.**

ಈ ಸುದೀರ್ಘವಾದ ವಚನವು ವೈದ್ಯ ಸಂಗಣ್ಣನವರಿಗಿದ್ದ 'ಶರೀರ ರಚನಾಶಾಸ್ತ್ರ' (Anatomy) ಕುರಿತಾದ ಆಳವಾದ ಜ್ಞಾನದ ಕುರಿತಾಗಿ ಮಾಹಿತಿಯನ್ನು ನೀಡುತ್ತದೆ. ದೇಹವೇ ಅನುಭಾವ ಸಾಧನೆಗೆ ಅಗತ್ಯವಾದ್ದರಿಂದ ದೇಹದ ಆರೋಗ್ಯಕ್ಕೆ ಕೊಟ್ಟ ಮಹತ್ವವು ತಿಳಿದುಬರುತ್ತದೆ. ಈ ವಚನವು ಮುಖ್ಯವಾಗಿ ಎರಡು ವಿಷಯಗಳನ್ನು ತಿಳಿಸುತ್ತದೆ ದೇಹದ ಸ್ಥೂಲ ಮತ್ತು ಸೂಕ್ಷ್ಮ ರಚನೆಯ ಕುರಿತಾದ ಮಾಹಿತಿ. ಮತ್ತೊಂದು ಕಾಯಕದ ಮಹತ್ವ. ಆತ್ಮ ಜ್ಞಾನದ ಅರಿವನ್ನು ಸಾಧಿಸಲು ವಚನಕಾರರು ತಮ್ಮ ಕಾಯಕವನ್ನೇ ಅನುಭಾವಿಕ ನೆಲೆಯನ್ನಾಗಿ ಹೊಂದಿದ್ದರು ಎಂಬುದಾಗಿದೆ. "...ಆತನೆ ಇರವನರಿದವ. ಇಂತೀ ಕಾಯಕದ ವೈದ್ಯವ ಮಾಡಬಲ್ಲವ, ಮೇಲನರಿದು ಕೀಳ ಮರೆಯಬಲ್ಲಡೆ, ಆತ ವೈದ್ಯಪಂಡಿತನೆಂಬೆ, ಮರುಳಶಂಕರಪ್ರಿಯ ಸಿದ್ಧರಾಮೇಶ್ವರಲಿಂಗವ ಬಲ್ಲವ" ಎಂಬ ಸಾಲುಗಳಲ್ಲಿ ವೈದ್ಯನ ಗುಣ ನಡೆಗಳ ಕುರಿತು ಮತ್ತು ಅವನಿಗಿರಬೇಕಾದ ಜ್ಞಾನ, ಈ ಮೂಲಕ ವೈದ್ಯ ಕಾಯಕವನ್ನೇ ಅವನ ಅನುಭಾವದ ಮಾರ್ಗವಾಗಿರಬೇಕಾದ ಕುರಿತು ತಿಳಿಸುತ್ತದೆ. ಕಾಯಕವೇ ಆಧ್ಯಾತ್ಮ ಮಾರ್ಗವಾಗಬೇಕಾದ ಚಿಂತನೆಯು ವಚನ ಚಳುವಳಿಯ ಬಹುದೊಡ್ಡ ದರ್ಶನವಾಗಿದೆ ಎನ್ನಬಹುದು.

ವೈದ್ಯ ಸಂಗಣ್ಣನವರ ಚಿಂತನೆಯ ಅತ್ಯಂತ ಆಧುನಿಕವಾಗಿ ಕಾಣಿಸುವ ಅಂಶವೆಂದರೆ ದೇಹ ಮತ್ತು ಮನಸ್ಸನ್ನು ಪ್ರತ್ಯೇಕ ಅಸ್ತಿತ್ವಗಳಂತೆ ಪರಿಗಣಿಸದಿರುವುದು. ದೇಹದ ಆರೋಗ್ಯಕ್ಕೆ ಮನಸ್ಸಿನ ಸ್ಥಿತಿ ಸಂಬಂಧಿಸಿದೆ. ಹಾಗೆಯೇ ಮನಸ್ಸಿನ ಸ್ಥಿತಿಗೂ ದೇಹದ ಸ್ಥಿತಿ ಪರಿಣಾಮ ಬೀರುತ್ತದೆ. ಹೀಗೆ ದೇಹ ಮತ್ತು ಮನಸ್ಸು ಒಂದಕ್ಕೊಂದು ಅನುಬಂಧಿತವಾಗಿವೆ ಎಂಬ ಚಿಂತನೆಯು ಇಂದಿನ ಮನೋವಿಜ್ಞಾನದ ಕ್ಷೇತ್ರವೂ ಒತ್ತಿ ಹೇಳುವ ವಿಷಯವೇ ಆಗಿದೆ. ಅವರ ವೈದ್ಯಕೀಯ ರೂಪಕದಲ್ಲಿ ದೇಹಕ್ಕೆ ಬರುವ

ರೋಗದಂತೆ ಆತ್ಮಕ್ಕೂ ಅಥವಾ ಅಂತರಂಗಕ್ಕೂ 'ರೋಗ' ಉಂಟಾಗಬಹುದು. ಅಜ್ಞಾನ, ಅಹಂಕಾರ, ಅವಿಶ್ವಾಸ, ಅಸ್ಥಿರತೆ, ದುಶ್ಚಟ ಮತ್ತು ನೈತಿಕ ಕುಸಿತಗಳನ್ನು ಅಂತರಂಗದ ವ್ಯಾಧಿಗಳೆಂದು ಹೇಳುವರು.

**ಭಕ್ತಂಗೊಂದೆ ವಾಕ್ಯ, ಬಾಳೆಗೊಂದೆ ಫಲ.**
**ವಿರಕ್ತ ಬಿಟ್ಟುದ ಹಿಡಿದಲ್ಲಿ ಮತ್ತೆ ಮುಟ್ಟಿದಡೆ ಸತ್ತನಾಯ ಹಡುಹು.**
**ಮತ್ತೆ ಸತ್ಕ್ರಿಯೆಯಲ್ಲಿ ನಡೆವವ ತನ್ನ ನಿತ್ಯನೇಮವ ತಪ್ಪಿ,**
**ಕೆಟ್ಟು ನಡೆದು, ಮತ್ತೆ ದ್ರವ್ಯವ ಕೊಟ್ಟು,**
**ಭಕ್ತರೊಡೆಯರಲ್ಲಿ ತಪ್ಪ ಪರಿಹರಿಸಿಕೊಂಡಿಹೆನೆಂದು**
**ಬೆಂಬಿಟ್ಟಿಯ ಭಂಡರ ಕಂಡಡೆ,**
**ಮರುಳಶಂಕರಪ್ರಿಯ ಸಿದ್ಧರಾಮೇಶ್ವರ**
**ಲಿಂಗವಾಯಿತ್ತಾದಡೂ ಒಡಗೂಡಲೊಲ್ಲೆ**

ಈ ವಚನದ ಮೂಲಕ ವೈದ್ಯ ಸಂಗಣ್ಣನವರು ಅಂತರಂಗದ ಅಶುದ್ಧತೆ, ಅನೈತಿಕತೆಯ ಬಗ್ಗೆ ಹೇಳುತ್ತಿದ್ದಾರೆ. ಭಕ್ತನಾದವನ ಗುರಿಯು ಅನುಭಾವವ ಸಾಧಿಸುವುದರ ಕಡೆಗೆ ಇರಬೇಕು. ಆ ಮಾರ್ಗದಲ್ಲಿ ಮತ್ತೆ ಮತ್ತೆ ದಾರಿಕೆಟ್ಟರೆ ಅವನಿಗೆ ಭಕ್ತನ ಲಕ್ಷಣಗಳಿಲ್ಲವೆಂದು ಅರ್ಥ. ಸತ್ಕ್ರಿಯೆಯಲ್ಲಿ ನಡೆಯಬೇಕಾದವನು ನಿತ್ಯನಿಯಮವ ಕೆಟ್ಟು ಮತ್ತೆ ಮತ್ತೆ ಭಕ್ತನಾಗಲು ಅರ್ಹನಲ್ಲ. ಅವನಿಗೆ ಅನುಭಾವವು ಸಿದ್ಧಿಸುವುದಿಲ್ಲ ಎಂಬ ನಿಲುವು ಅವರದ್ದಾಗಿದೆ. ಇದರಿಂದ ವೈದ್ಯ ಸಂಗಣ್ಣನವರ "ವೈದ್ಯ" ಎಂಬ ಸಾಧಕನು ಕೇವಲ ದೇಹಕ್ಕೆ ಚಿಕಿತ್ಸೆ ನೀಡುವ ವೈದ್ಯನಲ್ಲ. ಅವನು ದೇಹದ ರೋಗವನ್ನು ಗುರುತಿಸುವುದರ ಜೊತೆಗೆ ವ್ಯಕ್ತಿಯ ಅಂತರಂಗದ ಸ್ಥಿತಿಯನ್ನೂ ಅರಿಯುವವನಾಗಿದ್ದಾನೆ. ಈ ದೃಷ್ಟಿಯಿಂದ ಇವರ ವಚನಗಳ ವೈದ್ಯಕೀಯ ರೂಪಕಗಳು ಒಂದು ಸಮಗ್ರ ವ್ಯಕ್ತಿತ್ವ ವಿಕಸನದ ಹಾದಿಯನ್ನು ಬೋಧಿಸುತ್ತವೆ. ದೇಹಕ್ಕೆ ಔಷಧಿ, ಮನಸ್ಸಿಗೆ ವಿಶ್ವಾಸ, ಆತ್ಮಕ್ಕೆ ಜ್ಞಾನ ಮತ್ತು ಭಕ್ತಿ ಇವು ಪರಸ್ಪರ ಪೂರಕವಾಗಿ ಮನುಷ್ಯನು ಅನುಭಾವದ ಅನುಭೂತಿಯನ್ನು ಸಾಧಿಸಲು ನೆರವಾಗುತ್ತದೆ ಎಂಬುದು ವೈದ್ಯ ಸಂಗಣ್ಣನವರ ದರ್ಶನವಾಗಿದೆ. ವೈದ್ಯ ಸಂಗಣ್ಣನವರ ವಚನಗಳಲ್ಲಿ ದೇಹ ಮತ್ತು ಅಂತರಂಗದ ಚಿಕಿತ್ಸೆಗೆ 'ವಿಶ್ವಾಸ' ಎಂಬ ಪರಿಕಲ್ಪನೆ ಬಳಸಿರುವುದು ವಿಶೇಷವೆನಿಸಿದೆ. ಆಧ್ಯಾತ್ಮದ ಹಾದಿಯಲ್ಲಿ 'ವಿಶ್ವಾಸ' ಎಂಬ ಪದವು ನೈತಿಕ ಮಾರ್ಗದ ಮೇಲಿನ ಅಚಲವಾದ ನಂಬಿಕೆ ಮತ್ತು ಸಂಪೂರ್ಣ ಶರಣಾಗತಿಯ ಮನಸ್ಥಿತಿಯನ್ನು ಅಭಿವ್ಯಕ್ತಿಸುತ್ತದೆ.

**ಐದು ತತ್ತ್ವಂಗಳಿಂದಾದ ದೇಹಕ್ಕೆ ರೋಗರುಜೆಯಹುದೆ?**
**ಕಾಯತತ್ವಂಗಳ ಗೊತ್ತಿನಲ್ಲಿ ನಿಂದು,**
**ಅವರವರ ಚಿಕಿತ್ಸೆಯಲ್ಲಿ ಹೊತ್ತು ನಿತ್ತರಿಸುವುದೆ ಕ್ರಮ.**
**ಅದೆಂತೆಂದಡೆ : ಭಕ್ತಿನಿಷ್ಠೆ , ವಿಶ್ವಾಸನಿಷ್ಠೆ, ಜ್ಞಾನನಿಷ್ಠೆ.**
**ಇಂತಿ ಸದ್ಭಾವ ನೆಲೆಗೊಳ್ಳದ ಕಾರಣ,**

**ತನುವಿಂಗೆ ಅನುಪಾನವ ಪಾನವ ಮಾಡಬೇಕು.**
**ಮೇಲೆ ಅರಿದಡೆ, ಮನವು ಮನದಲ್ಲಿ ನಿಲಬೇಕು.**
**ಮರುಳಶಂಕರಪ್ರಿಯ ಸಿದ್ಧರಾಮೇಶ್ವರಲಿಂಗವನೊಡಗೂಡಬೇಕು**

ಈ ವಚನದಲ್ಲಿ ದೇಹದ ಪಂಚಭೂತ ತತ್ವಗಳಲ್ಲಿ ಜರುಗುವ ಸೂಕ್ಷ್ಮ ವ್ಯತ್ಯಯಗಳ ಕಾರಣದಿಂದ ಮಾತ್ರ ರೋಗಗಳು ಬರುವುದಿಲ್ಲ. ದೇಹದ ಜೊತೆಗೆ ಮನಸ್ಸು, ಆತ್ಮಗಳಲ್ಲಿನ ಅಸ್ವಸ್ಥತೆಯು ಸಮಗ್ರ ಅನಾರೋಗ್ಯಕ್ಕೆ ಕಾರಣವಾಗಿದೆ ಎಂಬ ವಿಷಯಗಳನ್ನು ತಿಳಿಸುತ್ತಿದೆ. ಇಲ್ಲಿ ಪ್ರತಿಯೊಬ್ಬರ ಅನಾರೋಗ್ಯವು ಭಿನ್ನ ಭಿನ್ನವಾಗಿದೆ. ಅವರಿಗೆ ಅಗತ್ಯವಾಗಿರುವ ಚಿಕಿತ್ಸೆಯನ್ನೇ ನೀಡುವ ಅಗತ್ಯವಿದೆ ಎನ್ನುವ ಚಿಂತನೆಯಲ್ಲಿ ಅನುಭಾವದ ಸಾಧನೆಗೆ ಒಂದಕ್ಕೊಂದು ಪೂರಕವಾಗಿರುವ ಭಕ್ತಿ–ವಿಶ್ವಾಸ–ಜ್ಞಾನಗಳು ಬಹು ಮುಖ್ಯವೆನಿಸಿವೆ. ಇವುಗಳಲ್ಲಿ ಯಾವೊಂದರ ಅಭಾವವಾದರೂ ಸಾಧನೆ ಜರುಗುವುದಿಲ್ಲ. ಹಾಗಾಗಿ ಇವುಗಳ ಕೊರತೆಯನ್ನು ಗುರುತಿಸಿಕೊಂಡು ಅಗತ್ಯವಾಗಿರುವುದನ್ನು ಅಳವಡಿಸಿಕೊಳ್ಳಬೇಕು ಅಥವಾ ಗುರುವೆಂಬ ವೈದ್ಯನ ಮೂಲಕ ಪಡೆಯಬೇಕೆಂಬುದನ್ನೇ ''ತನುವಿಂಗೆ ಅನುಪಾನವ ಮಾಡಬೇಕು'' ಎಂಬ ರೂಪಕದ ಮೂಲಕ ವೈದ್ಯ ಸಂಗಣ್ಣನವರು ಹೇಳಿದ್ದಾರೆ.

ವೈದ್ಯ ಸಂಗಣ್ಣನವರ ವಚನಗಳ ಒಟ್ಟು ಆಶಯವು ಆತ್ಮಜ್ಞಾನದ ಸಾಧನೆಯಾಗಿದೆ. ಆತ್ಮವು ದೇಹಕ್ಕೆ ಸಮಾನವಾದ ವಸ್ತುವಲ್ಲ. ದೇಹವು ಪರಿವರ್ತನಶೀಲವಾದರೆ ಆತ್ಮವು ಚೈತನ್ಯದ ಮೂಲವಾಗಿದೆ. ಅವರ ವಚನಗಳಲ್ಲಿ ದೇಹ ಮತ್ತು ಆತ್ಮಗಳ ಸಂಬಂಧವನ್ನು ವೈದ್ಯಕೀಯ ರೂಪಕದ ಮೂಲಕ ವಿವರಿಸುವ ಪ್ರಯತ್ನ ಕಂಡುಬರುತ್ತದೆ. ಅವರ ಅನೇಕ ವಚನಭಾಗಗಳಲ್ಲಿ ದೇಹ ಮತ್ತು ಆತ್ಮವನ್ನು ಪರಸ್ಪರ ಬೇರ್ಪಡಿಸಿ ಒಂದಕ್ಕೆ ಮಾತ್ರ ಔಷಧ ನೀಡಬಾರದು ಎಂಬ ಆಶಯ ವ್ಯಕ್ತವಾಗುತ್ತದೆ. ಇದರ ಹಿಂದೆ ಒಂದು ಆಳವಾದ ತಾತ್ವಿಕ ನಿಲುವಿದೆ. ಈ ಮೂಲಕ ವ್ಯಕ್ತಿಯು ಕೇವಲ ದೇಹವಲ್ಲ, ಕೇವಲ ಆತ್ಮವೂ ಅಲ್ಲ, ಅನುಭವದ ಮಟ್ಟದಲ್ಲಿ ದೇಹ, ಮನಸ್ಸು ಮತ್ತು ಚೈತನ್ಯಗಳ ಸಮಗ್ರ ಅಸ್ತಿತ್ವವಾಗಿರುವುದನ್ನು ಕುರಿತು ಒತ್ತಿ ಹೇಳಲು ಯತ್ನಿಸುತ್ತಿದ್ದಾರೆ. ಇಲ್ಲಿ ಆತ್ಮವನ್ನು ಜೀವಂತ ಚೈತನ್ಯದ ತತ್ತ್ವವಾಗಿ ಗ್ರಹಿಸಬಹುದು. ದೇಹವು ಆತ್ಮದ ಅಭಿವ್ಯಕ್ತಿಗೆ ಸಾಧನವಾದರೆ, ಆತ್ಮವು ದೇಹಕ್ಕೆ ಜೀವಂತಿಕೆಯನ್ನು ನೀಡುವ ತತ್ತ್ವವಾಗಿದೆ.

**ಅಷ್ಟೋತ್ತರಶತವ್ಯಾಧಿಗಳ ಧರಿಸಿಕೊಂಡಿಪ್ಪುದು ಆತ್ಮನೊ, ಘಟನೊ?**
**ಆತ್ಮನೆಂದಡೆ ಸಾಯದು ಚಿತ್ತ ,**
**ಘಟವೆಂದಡೆ ಆತ್ಮನಿಲ್ಲದೆ ಅರಿಯದು ದೇಹ.**
**ಇಂತೀ ಒಂದ ಕಳೆದು, ಒಂದಕ್ಕೆ ಔಷಧಿಯ ಕೊಟ್ಟಿಹನೆಂದಡೆ,**
**ಆ ಎರಡರ ಸಂಗದಿಂದ ರುಜೆ ಪ್ರಮಾಣು.**
**ಇಂತೀ ಶರೀರಾತ್ಮ ಆದಿಯಾಗಿ ಬಂದ ವ್ಯಾಧಿಗೆ**
**ನಾನೊಂದು ಔಷಧಿಯ ಭೇದವ ಹೇಳಿಹೆ.**
**ಆಧಾರದಲ್ಲಿಪ್ಪ, ಮೂಲಿಕೆಯ ಬೇರನರದು, ಐದಿಂದ್ರಿಯವ ಕೂಡಿಕೊಂಡು.**

**ಮೂರು ಮುಟ್ಟದ ತಟ್ಟೆಯಲ್ಲಿ ಬೇಗ ತೆಗೆದುಕೊಳ್ಳಿ.**
**ಆ ಮದ್ದು ವಾಂತಿಗೆ ಸಲ್ಲ, ವಿರೋಚನವಿಲ್ಲ.**
**ನಾನಾ ವೈದ್ಯರ ಭೇದಗಾಣುವ ಕ್ರಮವಲ್ಲ.**
**ಇದು ಸಿದ್ಧಾಂತ ಮೂಲಿಕೆ, ಇದ ಸಾಧಿಸಿಕೊಳ್ಳಿ.**
**ಎಂದೆಂದಿಗೂ ರುಜೆಯಿಲ್ಲ, ಸಂದುಸಂಶಯವಿಲ್ಲ,**
**ಮರುಳಶಂಕರಪ್ರಿಯ ಸಿದ್ಧರಾಮೇಶ್ವರಲಿಂಗದಲ್ಲಿ.**

ಈ ವಚನದ ಪ್ರಾರಂಭದಲ್ಲೇ ಅಷ್ಟೋತ್ತರಶತವ್ಯಾಧಿಗಳ ಧರಿಸಿಕೊಂಡಿಪ್ಪುದು ಆತ್ಮನೊ, ಘಟನೊ? ಎಂಬ ಪ್ರಶ್ನೆಯನ್ನು ವೈದ್ಯ ಸಂಗಣ್ಣನವರು ಇರಿಸಿದ್ದಾರೆ. ಈ ಪ್ರಶ್ನೆಯು ವೈದ್ಯಕೀಯ ಜ್ಞಾನವನ್ನು ನೇರವಾಗಿ ತಾತ್ತ್ವಿಕ ಪ್ರಶ್ನೆಯನ್ನಾಗಿ ಪರಿವರ್ತಿಸುತ್ತದೆ. ಅನೇಕ ವ್ಯಾಧಿಗಳನ್ನು ಅನುಭವಿಸುವುದು ಯಾವುದು ದೇಹವೇ? ಆತ್ಮವೇ? ಎಂಬ ಪ್ರಶ್ನೆಯ ಮೂಲಕ ದೇಹ ಮತ್ತು ಆತ್ಮಗಳ ಭೇದವನ್ನು ಪರಿಶೀಲಿಸಲಾಗಿದೆ. ಈ ಪ್ರಶ್ನೆಯು ಭಾರತೀಯ ಅನೇಕ ದಾರ್ಶನಿಕ ಪರಂಪರೆಗಳ ಒಂದು ಪ್ರಮುಖ ಪ್ರಶ್ನೆಯೊಂದಿಗೆ ಸಂಬಂಧ ಹೊಂದಿದೆ. ಅದು 'ನಾನು ಯಾರು?'. ದೇಹವು ಹುಟ್ಟುತ್ತದೆ, ಬೆಳೆಯುತ್ತದೆ, ರೋಗಪೀಡಿತವಾಗುತ್ತದೆ ಮತ್ತು ಅಂತಿಮವಾಗಿ ನಾಶವಾಗುತ್ತದೆ. ಆದರೆ ಆತ್ಮವನ್ನು ನಿತ್ಯಚೈತನ್ಯದ ರೂಪದಲ್ಲಿ ಗ್ರಹಿಸಿದರೆ, ದೇಹದ ವ್ಯಾಧಿಯನ್ನು ಆತ್ಮದ ಅಂತಿಮ ಸ್ವರೂಪವೆಂದು ಪರಿಗಣಿಸಲಾಗುವುದಿಲ್ಲ. ಭವ ಬಂಧನದಲ್ಲಿ ನರಳುತ್ತಿರುವಂತಹ ಮನುಷ್ಯನಿಗೆ ಅಜ್ಞಾನದ ಕಾರಣ ದೇಹ ಮತ್ತು ಅಂತರಂಗಕ್ಕೆ ಎರಡಕ್ಕೂ ರೋಗವು ಸಂಭವಿಸಿದೆ. ಈ ರೋಗವು ಶರೀರಾತ್ಮ ಆದಿಯಾಗಿ ಬಂದಿರುವ ಕಾರಣ ವ್ಯಕ್ತಿಗೆ ದೇಹಕ್ಕೆ ಮಾತ್ರವಲ್ಲದೇ ಆತ್ಮವನ್ನೂ ಒಳಗೊಂಡ ಸಮಗ್ರಚಿಕಿತ್ಸೆಯು ಅಗತ್ಯವಿದೆ ಎನ್ನುತ್ತಾರೆ ವೈದ್ಯ ಸಂಗಣ್ಣನವರು. ಮುಂದುವರೆದು ಇಂತಹ ರೋಗಕ್ಕೆ ವೈದ್ಯ ಪರಿಭಾಷೆಯನ್ನೇ ರೂಪಕವಾಗಿಸಿ ಅಂತರಂಗದ ಜ್ಞಾನವನ್ನು ಸಾಧಿಸಿ ರೋಗಮುಕ್ತವಾಗುವ ಪರಿಯನ್ನು ತಿಳಿಸಿದ್ದಾರೆ.

ವೈದ್ಯ ಸಂಗಣ್ಣನವರು ಆತ್ಮದ ಅರಿವನ್ನು ಸಾಧಿಸುವ ಅಗತ್ಯತೆಯ ಕುರಿತಾಗಿ ಒಂದು ವಚನದಲ್ಲಿ ತಿಳಿಸಿದ್ದಾರೆ. ದೇಹವನ್ನೇ ಸತ್ಯವೆಂದು ನಂಬಿ ಬದುಕಿದರೆ ಈ ಲೌಕಿಕ ಜೀವನವು ನಮ್ಮನ್ನು ಬಾಧಿಸುತ್ತಲೇ ಇರುತ್ತದೆ. ನಮ್ಮೊಳಗಿನ ನಿಜಪ್ರಜ್ಞೆಯಾದ ಆತ್ಮದ ಇರವನ್ನು ಮತ್ತು ಅದರ ಅರಿವನ್ನು ಸಾಧಿಸಿದರೆ ನಿಜವಾದ ಮುಕ್ತಿ ಸಿಗುತ್ತದೆ. ಇಂತಹ ಜ್ಞಾನದಿಂದ ದಕ್ಕಬೇಕಾದ ಮುಕ್ತಿಯನ್ನು ದೇಹಕ್ಕೆ ಸಾವು ಬಂದ ನಂತರ ಸಿಗುತ್ತದೆ ಎಂದು ನಂಬುವುದು ಮೂರ್ಖತನದ ಪರಮಾವಧಿಯಾಗುತ್ತದೆ. ಅಂತರಂಗದೊಳಗಿನ ಎಚ್ಚರ, ಅರಿವು ನಮಗೆ ಮುಕ್ತಿಯನ್ನು ತಂದುಕೊಡುತ್ತವೆ. ಇಂತಹ ಆತ್ಮಜ್ಞಾನವು ನಮಗೆ ದೇಹ ತೊರೆದಮೇಲೆ ಸಾಧಿಸಲು ಸಾಧ್ಯವಿಲ್ಲ. ನಾವು ದೇಹವನ್ನು ಆಶ್ರಯಿಸಿದ್ದಾಗಲೇ ಸಾಧಿಸುವ ಅಗತ್ಯವಿದೆ. ಈ ಸಾಧನೆಯ ಬಳಿಕ ಈ ಆತ್ಮವು ಮತ್ತೆ ಮತ್ತೆ ಭವವೆತ್ತಿ ಬರುವುದಿಲ್ಲ. ಈ ಕುರಿತಾಗಿ ರೂಪಕಗಳ ಮೂಲಕ ವೈದ್ಯ ಸಂಗಣ್ಣನವರು ತಿಳಿಸಿರುವುದು ವಿಶೇಷವೆನಿಸಿದೆ. ''ಕಣ್ಣು ಕಳೆದ ಮತ್ತೆ ಅಂಜನಕ್ಕೆ ತಿಳಿವುದೇ? ಆತ್ಮನಿದ್ದಲ್ಲಿ ಅರಿಯದೆ ಅಸು ಸತ್ತ ಮತ್ತೆ ಮೋಕ್ಷವನಲರಸಲುಂಟೇ?''

ಎಂಬ ವಚನದ ಸಾಲಿನಲ್ಲಿ ಕಣ್ಣಿನ ದೃಷ್ಟಿಯನ್ನು ಕಳೆದುಕೊಂಡ ಬಳಿಕ ಕಣ್ಣಿನ ಚಿಕಿತ್ಸೆಗೆ ಬಳಸುವ ಅಂಜನವನ್ನು ಲೇಪಿಸಿದರೆ ಅದಕ್ಕೆ ತಿಳಿಯುವುದೇ ಇಲ್ಲ ಮತ್ತು ಅದರಿಂದ ಪ್ರಯೋಜನವೂ ಇಲ್ಲ. ಹಾಗೆಯೇ ದೇಹಕ್ಕೆ ಸಾವು ಬಂದ ಬಳಿಕ ಅಂತಹ ಆತ್ಮಜ್ಞಾನ ಸಾಧಿಸಲು ಸಾಧ್ಯವಿಲ್ಲ. ದೇಹವೇ ಆತ್ಮಕ್ಕೆ ಆಶ್ರಯ ತಾಣವಾಗಿರುವ ಕಾರಣ ದೇಹ ಸುಸ್ಥಿತಿಯಲ್ಲಿದ್ದಾಗಲೇ ಸತ್ಯದ ಅರಿವನ್ನು ಸಾಧಿಸಬೇಕು. ಇದನ್ನು ಸಾಧಿಸುವ ಪರಿಯನ್ನು ಮುಂದುವರೆದು ಸಂಗಣ್ಣನವರು ಹೀಗೆ ಹೇಳುತ್ತಾರೆ. "ಎಚ್ಚರಿಕೆ ತನಗಿದ್ದಲ್ಲಿ ನಾನೊಂದು ನಿಶ್ಚಯದ ಮದ್ದ ತಂದೆ. ಆ ಮದ್ದಿನ ಭೇದ ಘಟಕ್ಕೆ ಕೇಡಿಲ್ಲ. ಆತ್ಮಂಗೆ ಭವವಿಲ್ಲ. ಅರಿವಿಂಗೆ ತುದಿಮೊದಲಿಲ್ಲ. ಇದು ನಿರಿಗೆ ಕೊಳಬಲ್ಲಡೆ, ಗುರುವಿಂಗೆ ತನು, ಲಿಂಗಕ್ಕೆ ಮನ, ಜಂಗಮಕ್ಕೆ ಧನ, ರೋಗ ಹೋಯಿತ್ತು. ಬೇಗ ಅರಿದುಕೊಳ್ಳಿ, ಮರುಳಶಂಕರಪ್ರಿಯ ಸಿದ್ಧರಾಮೇಶ್ವರಲಿಂಗ ಸಾಕ್ಷಿಯಾಗಿ". ಈ ಸಾಲುಗಳಲ್ಲಿ ದೇಹದೊಳಗಿನ ಪ್ರಜ್ಞೆಯ ಎಚ್ಚರವಿದ್ದಾಗ ಮಾತ್ರವೇ ಆತ್ಮದ ಅರಿವು ಸಾಧ್ಯವಾಗುತ್ತದೆ. ಆಗ ಆತ್ಮವು ಮತ್ತೆ ಮತ್ತೆ ದೇಹವೆತ್ತಿ ಬರುವುದಿಲ್ಲ ಎನ್ನುತ್ತಾರೆ. ಗುರುವಿಗೆ ತನುವನ್ನು, ಲಿಂಗಕ್ಕೆ ಮನವನ್ನು, ಜಂಗಮಕ್ಕೆ ಧನವನ್ನು ಅರ್ಪಿಸಿಕೊಂಡಾಗ ಶರೀರಾತ್ಮ ಆದಿಯಾಗಿ ಬಂದ ರೋಗ ಹೋಗುತ್ತದೆ ಬೇಗ ತಿಳಿದುಕೊಳ್ಳಿ ಎನ್ನುವರು. ಇದರಲ್ಲಿ ಬಹು ಆಳವಾದ ಆಧ್ಯಾತ್ಮ ಚಿಂತನೆಗಳನ್ನು ಕಾಣಬಹುದು. ತನು, ಮನ, ಧನಗಳೆಂಬ ಮೂರು ವಿಷಯಗಳು ದೇಹ, ಆತ್ಮ ಮತ್ತು ನಾನು ನನ್ನದು ಎಂಬ ಎಲ್ಲಭಾವಗಳನ್ನು ತನ್ನೊಂದಿಗೆ ಗುರುತಿಸಿಕೊಳ್ಳದೆ ಗುರು–ಲಿಂಗ–ಜಂಗಮ ಎಂಬ ತತ್ವಗಳಿಗೆ ಅರ್ಪಿಸಿಕೊಳ್ಳುವುದನ್ನು ಸೂಚಿಸುತ್ತವೆ. ಈ ಅರ್ಪಣಾ ಮನೋಭಾವ ಮತ್ತು ಶರಣಾಗತಿಯ ಮನಸ್ಥಿತಿಯು ಅನುಭಾವ ಸಾಧಿಸಲು ನೆರವಾಗುತ್ತದೆ. ಈ ಸ್ಥಿತಿಯಲ್ಲಿ ಬ್ರಹ್ಮಜ್ಞಾನವು ದಕ್ಕಿರುತ್ತದೆ. ಈ ಜ್ಞಾನವು ಮನುಷ್ಯನನ್ನು ಎಲ್ಲ ಬಗೆಯ ವಿಷಯಗಳಿಂದ ಮುಕ್ತಿಯನ್ನು ತಂದುಕೊಟ್ಟಿರುತ್ತದೆ. ಇದು ಶರಣ ಚಿಂತನೆಯ ಶಿವಾನುಭವವಾಗಿದೆ. ಈ ಸಾಧನೆಯು ದೇಹವು ಸ್ವಸ್ಥವಾಗಿದ್ದಾಗಲೇ ಸಾಧಿಸುವ ಅಗತ್ಯವಿದೆ ಎನ್ನುತ್ತಾರೆ ವೈದ್ಯ ಸಂಗಣ್ಣನವರು.

ವೈದ್ಯ ಸಂಗಣ್ಣನವರ ದೇಹಮೀಮಾಂಸೆಯ ಮತ್ತೊಂದು ಮುಖ್ಯ ಅಂಶ ದೇಹದ ನಶ್ವರತೆಯ ಅರಿವು. ದೇಹವು ರೋಗಪೀಡಿತವಾಗುತ್ತದೆ, ಬದಲಾಗುತ್ತದೆ ಮತ್ತು ಅಂತಿಮವಾಗಿ ನಾಶವಾಗುತ್ತದೆ. ಆದರೆ ಆತ್ಮವನ್ನು ಅದರಾಚೆಯ ಚೈತನ್ಯತತ್ತ್ವವಾಗಿ ಕಾಣಲಾಗುತ್ತದೆ. ಹೀಗಾಗಿ ದೇಹವನ್ನು ಅತಿಯಾಗಿ ಆರಾಧಿಸುವುದೂ ತಪ್ಪು. ದೇಹವನ್ನು ಸಂಪೂರ್ಣವಾಗಿ ನಿರಾಕರಿಸುವುದೂ ತಪ್ಪು. ದೇಹವನ್ನು ಸಾಧನವಾಗಿ ಗೌರವಿಸಬೇಕು. ಆತ್ಮವನ್ನು ಗುರಿಯಾಗಿ ಅರಿಯಬೇಕು. ಇದು ವೈದ್ಯ ಸಂಗಣ್ಣನವರ ದೇಹ–ಆತ್ಮ ಮೀಮಾಂಸೆಯ ಅತ್ಯಂತ ಮುಖ್ಯ ಚಿಂತನೆಯಾಗಿದೆ.

**"...ವೈದ್ಯ ಪ್ರಯೋಗದಿಂದ ಆತ್ಮನ ಭೇದಿಸಿಕೊಂಡು,**
**ಹಂಸನು ಇಹ ಇರವೆಂಬ ತೆರನ ತಿಳಿದು,**
**ರಸ ನಾಲಗೆಯಲ್ಲಿ, ಗಂಧ ನಾಸಿಕದಲ್ಲಿ , ರೂಪು ಕಂಗಳಲ್ಲಿ,**
**ಶಬ್ದ ಕಿವಿಗಳಲ್ಲಿ, ಸ್ಪರುಶನ ಕೈಗಳಲ್ಲಿ ,**

ಇಂತಿ ಪಂಚೇಂದ್ರಿಯಂಗಳಲ್ಲಿ ಉಷ್ಣ ಶೈತ್ಯವಪ್ಪುದನರಿದು,
ನಾಲಿಗೆಯಲ್ಲಿ ದ್ರವವನರಿದು,
ನಾಸಿಕದಲ್ಲಿ ಗಂಧವ ಸೂಸುವ ವಾಯುವಶೈತ್ಯವನರಿದು,
ಕರ್ಣವಾಸದಲ್ಲಿ ಶಬ್ದ ಸೂತ್ರಗೆಟ್ಟು,
ನೇತ್ರದಲ್ಲಿ ಕಪೋತ ಸಿಕ್ಕಿ, ಶ್ವೇತವಿಹಿತವಾಗಿ ಗರ್ಭಿಕರಿಸಿದ ಮತ್ತೆ
ವೈದ್ಯದಲೇತರ ಗುಣ.
ಇಂದ್ರಿಯಗುಣರೋಗಕ್ಕೆ ಜ್ಞಾನವೈದ್ಯ ನೋಡಾ,
ಮರುಳಶಂಕರಪ್ರಿಯ ಸಿದ್ಧರಾಮೇಶ್ವರಾ.''

ಈ ವಚನದಲ್ಲಿ ದೇಹದೊಳಗೆಯೇ ಆಶ್ರಯಿಸಿರುವ ಆತ್ಮವನ್ನು ಹುಡುಕಿಕೊಳ್ಳುವ ಪರಿಯನ್ನು ''ಹಂಸನು ಇಹ ಇರವೆಂಬ ತೆರನ ತಿಳಿದು,'' ಎಂಬ ರೂಪಕದಲ್ಲಿ ತಿಳಿಸಿದ್ದಾರೆ ವೈದ್ಯ ಸಂಗಣ್ಣನವರು. ಅಜ್ಞಾನದಿಂದ ದೇಹದ ಇಂದ್ರಿಯಗಳು ಹತೋಟಿ ತಪ್ಪುತ್ತವೆ. ಇದರಿಂದ ದೇಹ ಮತ್ತು ಆತ್ಮಗಳೆರಡೂ ರೋಗವನ್ನು ಅನುಭವಿಸಬೇಕಾಗುತ್ತದೆ. ಹತೋಟಿಯಲ್ಲಿರದ ಇಂದ್ರಿಯಗಳನ್ನು ಕುರಿತಾಗಿ ಈ ವಚನದಲ್ಲಿ ''ನಾಲಿಗೆಯಲ್ಲಿ ದ್ರವವನರಿದು, ನಾಸಿಕದಲ್ಲಿ ಗಂಧವ ಸೂಸುವ ವಾಯುವಶೈತ್ಯವನರಿದು, ಕರ್ಣವಾಸದಲ್ಲಿ ಶಬ್ದ ಸೂತ್ರಗೆಟ್ಟು, ನೇತ್ರದಲ್ಲಿ ಕಪೋತ ಸಿಕ್ಕಿ, ಶ್ವೇತವಿಹಿತವಾಗಿ ಗರ್ಭಿಕರಿಸಿದ ಮತ್ತೆ ವೈದ್ಯದಲೇತರ ಗುಣ.'' ಎಂದು ಹೇಳುತ್ತಾ ವ್ಯಕ್ತಿತ್ವ ವಿಕಸನಕ್ಕಾಗಿ ಬಳಕೆಯಾಗದ ಇಂದ್ರಿಯಗಳು ಅನೈತಿಕತೆ, ದುಶ್ಚಟಗಳು, ಕೆಟ್ಟ ಮಾತು, ಕೆಟ್ಟ ದೃಷ್ಟಿಯನ್ನು ಹೊಂದಿ ಮನುಷ್ಯ ಅಧಃಪತನದತ್ತ ಸಾಗುತ್ತಾನೆ. ಹೀಗೆ ಇಂದ್ರಿಯಗಳು ಹತೋಟಿಯಲ್ಲಿ ಇಲ್ಲದವನ ಮಾನಸಿಕ ದೈಹಿಕ ಆರೋಗ್ಯಕ್ಕೆ ವೈದ್ಯವನ್ನು ಮಾಡಿದರೆ ಪ್ರಯೋಜನವಿಲ್ಲ. ಅಂತವರಿಗೆ ''ನಾನು ಯಾರು?'' ಎಂಬಂತಹ ಆತ್ಮಜ್ಞಾನದ ಅಗತ್ಯವಿದೆ. ಈ ಕಾರಣಕ್ಕಾಗಿ ಮುಂದುವರೆದು ''ಇಂದ್ರಿಯಗುಣರೋಗಕ್ಕೆ ಜ್ಞಾನವೈದ್ಯ ನೋಡಾ, ಮರುಳಶಂಕರಪ್ರಿಯ ಸಿದ್ಧರಾಮೇಶ್ವರಾ.'' ಎಂದು ಹೇಳುವರು. ಈ ದೃಷ್ಟಿಯಿಂದ ಇವರ ಇನ್ನಿತರ ವಚನಗಳ ಸಾಲುಗಳನ್ನು ಗಮನಿಸಬಹುದು.

''ತನ್ನನರಿವಲ್ಲಿ ಮನಮುಕ್ತವಾಗಿ ಉಭಯವವಳಿದು ಒಡಗೂಡಬೇಕು.'',
''ಇಂತೀ ಭೇದವ ತಿಳಿದು, ಷಟ್ಸ್ಥಲವೇದಿಗಳಾಗಬೇಕು.''
''ಮರುಳಶಂಕರಪ್ರಿಯ ಸಿದ್ಧರಾಮೇಶ್ವರಲಿಂಗವ, ಅರಿವಲ್ಲಿ ವೇಧಿಸಿಕೊಳ್ಳಬೇಕು,''
''ಆತ್ಮಹಂಸನು ಷಡಾಧಾರವ ಮುಟ್ಟಿ, ಅಷ್ಟದಳ ಕಮಲವ ಮೆಟ್ಟಿ,''
ಮಿಕ್ಕಾದ ದ್ವಾರಂಗಳಲ್ಲಿ ತಟ್ಟಿ ಮುಟ್ಟದೆ ಹೋಹ
ಭೇದವ ಬಲ್ಲಡೆ, ನಾಡಿಯಲಾಡುವ ಆತ್ಮನ ಭೇದವ ಬಲ್ಲವ.
ಆತ್ಮನ ಸೋದಿಸಿ ತಿಳಿದಡೆ, ರುಜೆ ರೋಗವಳಿಯಿತ್ತಲ್ಲಿಯೆ..''
''ಗುರುನಾಡಿ ಉಭಯವ ಕೊಂಡೆಡೆಯಾಡುತ್ತಿದೆ
ಲಿಂಗನಾಡಿ ತ್ರಿವಿಧ ಸಂಧಿಯೊಳಗೆ ಸೂಸುತ್ತಿದೆ.
ಜಂಗಮನಾಡಿ ಮೂರರ ಹಂಗು ಬಿಟ್ಟು ಮಹದಲ್ಲಿ ಸಂದಿರುತ್ತದೇಕೋ?''

ಈ ಸಾಲುಗಳೆಲ್ಲವೂ ಜ್ಞಾನ ಮಾರ್ಗದ ಅನುಭಾವದ ಸಾಲುಗಳಾಗಿವೆ. ಆಧ್ಯಾತ್ಮದ ಹಾದಿಯಲ್ಲಿ ತನ್ನನ್ನು ತಾನು ತಿಳಿಯುವುದೇ ಮುಖ್ಯವಾದದ್ದು. ಲೋಕದೊಳಗಿನ ದ್ವೈತ ಭಾವವಳಿದು ಅರಿವನ್ನು ಸಂಪಾದಿಸಿಕೊಳ್ಳಬೇಕು. ಸ್ಥೂಲ ಮತ್ತು ಸೂಕ್ಷ್ಮ ದೇಹದ ಮೂಲಕ ಆತ್ಮದ ಇರವನ್ನು ಗ್ರಹಿಸಿಕೊಳ್ಳಬೇಕು. ಗುರು–ಲಿಂಗ–ಜಂಗಮ ತತ್ವಗಳ ಮೂಲಕ ಸತ್ಯದ ಹುಡುಕಾಟದ ಕಡೆಗೆ ಮನಸ್ಸಿರಬೇಕು ಎಂಬ ಆಶಯಗಳನ್ನು ಈ ವಚನಗಳ ಸಾಲುಗಳ ಮೂಲಕ ವೈದ್ಯ ಸಂಗಣ್ಣನವರು ಹೇಳಲೆತ್ನಿಸುತ್ತಿದ್ದಾರೆ.

ವೈದ್ಯ ಸಂಗಣ್ಣನವರ ವಚನಗಳಲ್ಲಿ ದೇಹ ಮತ್ತು ಆತ್ಮದ ಮೀಮಾಂಸೆ ಒಂದು ಸಮಗ್ರ ಮಾನವದರ್ಶನವಾಗಿ ರೂಪುಗೊಂಡಿದೆ. ಪಂಚತತ್ತ್ವಗಳಿಂದ ನಿರ್ಮಿತವಾದ ದೇಹವು ನಶ್ವರವಾದರೂ, ಅದು ಆತ್ಮಸಾಧನೆಯ ಅತ್ಯಗತ್ಯ ಸಾಧನವಾಗಿದೆ. ನಾಡಿ, ವಾಯು ಮತ್ತು ದೇಹದ ವಿವಿಧ ಕ್ರಿಯೆಗಳ ಮೂಲಕ ಅವರು ಸ್ಥೂಲ ದೇಹವನ್ನು ವಿವರಿಸುತ್ತಾರೆ. ಅದೇ ವೈದ್ಯಕೀಯ ಪರಿಭಾಷೆಯನ್ನು ಬಳಸಿ ಅಜ್ಞಾನ, ಭಕ್ತಿ, ವಿಶ್ವಾಸ, ಜ್ಞಾನ ಮತ್ತು ಆತ್ಮಾನುಭವದಂತಹ ಸೂಕ್ಷ್ಮ ತಾತ್ತ್ವಿಕ ಸಂಗತಿಗಳನ್ನೂ ವಿವರಿಸುತ್ತಾರೆ.

ಅವರ ದೃಷ್ಟಿಯಲ್ಲಿ ದೇಹದ ರೋಗಕ್ಕೆ ಔಷಧ ಅಗತ್ಯ. ಆದರೆ ಮಾನವನ ಸಂಪೂರ್ಣ ಆರೋಗ್ಯಕ್ಕೆ ಅಂತರಂಗದ ಶುದ್ಧಿಯೂ ಅಗತ್ಯ. ದೇಹಕ್ಕೆ ವೈದ್ಯಕೀಯ ಚಿಕಿತ್ಸೆ, ಮನಸ್ಸಿಗೆ ವಿಶ್ವಾಸ, ಅಜ್ಞಾನಕ್ಕೆ ಜ್ಞಾನ ಮತ್ತು ಆತ್ಮಕ್ಕೆ ಶಿವಾನುಭವ ಇವುಗಳ ಸಮನ್ವಯವೇ ಅವರ ಚಿಂತನೆಯ ಮೂಲಸೂತ್ರ. ಹೀಗಾಗಿ ವೈದ್ಯ ಸಂಗಣ್ಣನವರನ್ನು ಕೇವಲ 'ವೈದ್ಯ ವೃತ್ತಿಯ ವಚನಕಾರ' ಎಂದು ಗುರುತಿಸುವುದು ಅವರ ಸಾಹಿತ್ಯದ ವ್ಯಾಪ್ತಿಯನ್ನು ಸೀಮಿತಗೊಳಿಸುತ್ತದೆ. ಅವರು ವೈದ್ಯಕೀಯ ಜ್ಞಾನವನ್ನು ತತ್ತ್ವ ಚಿಂತನೆಯ ಭಾಷೆಯನ್ನಾಗಿ ಪರಿವರ್ತಿಸಿದ ವಚನಕಾರರು. ಅವರ ವಚನಗಳಲ್ಲಿ ವೈದ್ಯನು ರೋಗವನ್ನು ನೋಡುತ್ತಾನೆ, ತತ್ತ್ವಜ್ಞಾನಿ ರೋಗದ ಮೂಲವನ್ನು ನೋಡುತ್ತಾನೆ, ಶರಣನು ರೋಗಮುಕ್ತಿಯ ಅಂತಿಮ ಗುರಿಯಾದ ಶಿವಾನುಭವವನ್ನು ನೋಡುತ್ತಾನೆ ಎಂಬ ತಾತ್ವಿಕ ಸಂಗತಿಗಳನ್ನು ಗುರುತಿಸಬಹುದು.

ಈ ದೃಷ್ಟಿಯಿಂದ ವೈದ್ಯ ಸಂಗಣ್ಣನವರ ವಚನಗಳಲ್ಲಿ ದೇಹವು ಕೇವಲ ರೋಗದ ಆಶ್ರಯವಲ್ಲ, ಅದು ಆತ್ಮಸಾಧನೆಯ ಕ್ಷೇತ್ರ. ಮನಸ್ಸು ಕೇವಲ ಭಾವನೆಯ ಸ್ಥಳವಲ್ಲ, ಅದು ಅಂತರಂಗದ ಚಿಕಿತ್ಸೆಯ ಕ್ಷೇತ್ರ. ಆತ್ಮವು ಕೇವಲ ತಾತ್ತ್ವಿಕ ಪರಿಕಲ್ಪನೆಯಲ್ಲ, ಅದು ಮಾನವ ಜೀವನದ ಅಂತಿಮ ಚೈತನ್ಯಾನುಭವ. ಆದ್ದರಿಂದ ವೈದ್ಯ ಸಂಗಣ್ಣನವರ ದೇಹ–ಆತ್ಮ ಮೀಮಾಂಸೆಯ ಸಾರವನ್ನು 'ದೇಹದ ಸಂರಕ್ಷಣೆ, ಮನಸ್ಸಿನ ಶುದ್ಧೀಕರಣ ಮತ್ತು ಆತ್ಮದ ಅರಿವು' ಎಂಬ ತ್ರಿಸೂತ್ರದಲ್ಲಿ ಹಿಡಿದಿಡಬಹುದು.

ಅವರ ವಚನಗಳ ವೈದ್ಯಕೀಯ ಪರಿಭಾಷೆಯ ಹಿಂದೆ ಅಡಗಿರುವ ಈ ತಾತ್ತ್ವಿಕ ದೃಷ್ಟಿಯೇ ವೈದ್ಯ ಸಂಗಣ್ಣನನ್ನು ವಚನ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನಕ್ಕೆ ಏರಿಸುತ್ತದೆ. ಅವರ ವಚನಗಳು ಮಧ್ಯಕಾಲೀನ ಕರ್ನಾಟಕದ ವೈದ್ಯಕೀಯ ಜ್ಞಾನಪರಂಪರೆ ಮತ್ತು ಶರಣರ ಆತ್ಮಾನುಭವ ಪರಂಪರೆಗಳ ನಡುವಿನ ಅಪೂರ್ವ

ಸೇತುವೆಯಾಗಿ ನಿಲ್ಲುತ್ತವೆ.

## ಆಕರ ಗ್ರಂಥ:

1. ಭಾನುಮತಿ ವೈ.ಸಿ., (2021), ಸಂಕೀರ್ಣ ವಚನ ಸಂಪುಟ–04, ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ.

## ಪರಾಮರ್ಶನ ಗ್ರಂಥಗಳು:

1. ಚಂದ್ರಮೌಳಿ ಶಿವಶಂಕರ ನಾಯ್ಕ, (2025), ಆಯುರ್ವೇದ ಮತ್ತು ಪದಾರ್ಥ ವಿಜ್ಞಾನ, ಬೆಂಗಳೂರು: ಮೇಧಾ ಪಬ್ಲಿಶರ್ಸ್.
2. ಶಿವಕುಮಾರಸ್ವಾಮಿ ಎಂ., (2020), ಭಾರತೀಯ ದರ್ಶನಗಳು, ಬೆಂಗಳೂರು: ಪ್ರಸಾರಾಂಗ, ಕ.ಸಂ.ವಿ.ವಿ.
3. ಕವಿತಾ ಎಸ್.ಎಚ್., (2012), ಪ್ರಾಚೀನ ಭಾರತದ ವೈದ್ಯ ವಿಜ್ಞಾನ, ಬೆಂಗಳೂರು: ದೇಸಿ ಪುಸ್ತಕ.